# ಅಲಂಕಾರಕ್ಕೆ ಹೆಲಿಕೋನಿಯಾ!

ಚಿತ್ರ–ಬರಹ:
**ಗಣಂಗೂರು ನಂಜೇಗೌಡ**





ಬರ್ಡ್ ಆಫ್ ಪ್ಯಾರಡೈಸ್ ಪುಷ್ಪವನ್ನು ಹೋಲುವ ಹಳದಿ ಹೆಲಿಕೋನಿಯಾ

ಮನೆಯ ಅಂಗಳ, ಕಚೇರಿ, ತೋಟ ಮತ್ತು ಉದ್ಯಾನಗಳ ಅಂದ ಹೆಚ್ಚಿಸಲು ಹೆಲಿಕೋನಿಯಾದಂತಹ ಗಿಡಗಳು ಕಣ್ಮನ ತಣಿಸುವ ಹೂಗಳನ್ನು ಅರಳಿಸುತ್ತವೆ.

ಹೆಲಿಕೋನಿಯಾದಲ್ಲಿ ವಿಭಿನ್ನ ವರ್ಣದ ಹೂ ಬಿಡುವ ಗಿಡಗಳಿವೆ. ಹಳದಿ ಬಣ್ಣದ ಹೂ ಭಾಗಶಃ 'ಬರ್ಡ್ ಆಫ್ ಪ್ಯಾರಡೈಸ್' ಪುಷ್ಪವನ್ನು ಹೋಲುತ್ತದೆ. ಕಡುಗೆಂಪು ಬಣ್ಣದ ಹೂ ಸಣ್ಣ ಹೂಗಳನ್ನು ಪೋಣಿಸಿ ಮಾಡಿದ ಹೂ ಗುಚ್ಛದಂತೆ ಕಾಣುತ್ತದೆ. ಗೊಂಚಲು ಆಕಾರದ ಇದು ಊರ್ಧ್ವಮುಖವಾಗಿ ಬೆಳೆದು ಎಲೆಗಳ ಸಮಕ್ಕೆ ಬೆಳೆದು ನಿಲ್ಲುತ್ತದೆ. ಹಳದಿ ಅಂಚು ಹೊಂದಿದ್ದು ಹಕ್ಕಿಯ ಮೂತಿಯಂತೆ ಕಾಣುವ ಮತ್ತೊಂದು ಬಗೆಯ ಹೆಲಿಕೋನಿಯಾ ಹೂ ಹಾವಿನಂತೆ, ಬಳುಕುವ ಬಳ್ಳಿಯಂತೆ ಕಾಣುತ್ತದೆ. ಕೆಂಪು ಹೂವಿನ ಎಸಳುಗಳ ಅಂಚಿನಲ್ಲಿ ಹಳದಿ ಬಣ್ಣವನ್ನು ತೀಡಿದಂತೆ ಇದು ಗೋಚರಿಸುತ್ತದೆ.



ಕೆಂಪು ಹೆಲಿಕೋನಿಯಾ

ಹೆಲಿಕೋನಿಯಾ ವರ್ಷಪೂರ್ತಿ ಹೂ ಬಿಡುವ ಗಿಡ. ಬಾಳೆ ಗಿಡವನ್ನು ಹೋಲುವ ಇದು ಸದಾ ಕಾಲ ತೇವಾಂಶ ಬೇಡುತ್ತದೆ. ಈ ಗಿಡಕ್ಕೆ ಯಾವುದೇ ಕೀಟ ಬಾಧೆ ಇಲ್ಲ. ನೆಲದಲ್ಲಿ ಮಾತ್ರವಲ್ಲದೆ ಮಣ್ಣಿನ ಕುಂಡ, ತೆರೆದ ಚೀಲಗಳಲ್ಲಿಯೂ ಇದನ್ನು ಬೆಳೆಸಬಹುದು. ಬೀಜ ಅಥವಾ ಕಂದು ನೆಟ್ಟರೂ ಇದು ಸುಲಭವಾಗಿ ಚಿಗುರೊಡೆದು ಆಳೆತ್ತರ ಬೆಳೆಯುತ್ತದೆ. ನಾಟಿ ಮಾಡಿದ 10–12 ತಿಂಗಳಿಗೆ ಗಿಡದಲ್ಲಿ ಹೂ ಬಿರಿಯಲಾರಂಭಿಸುತ್ತವೆ. ಹೆಲಿಕೋನಿಯಾ ಪುಷ್ಪ ಕೃಷಿಯನ್ನು ಉದ್ಯಮ ಮಾಡಿಕೊಂಡವರೂ ಇದ್ದಾರೆ. ನೋಡಲು ಆಕರ್ಷಕವಾಗಿರುವ ಹೆಲಿಕೋನಿಯಾ ಹೂವಿನ ಮೇಲ್ಮೈ ಪ್ಲಾಸ್ಟಿಕ್ ಪೇಪರ್‌ನಂತೆ ಒರಟಾಗಿರುತ್ತದೆ. ಇದರ ವಿಶೇಷವೆಂದರೆ, ಗಿಡದಿಂದ ಕಿತ್ತ ಹೂ ಒಂದು ವಾರದ ವರೆಗೂ ತನ್ನ ತಾಜಾತನವನ್ನು ಉಳಿಸಿಕೊಂಡಿರುವುದು.